# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2577
2. ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ
3. ಉತ್ತರಿಸಬೇಕಾದ ದಿನಾಂಕ : 24-03-2022

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಕೊಡಗು ಜಿಲ್ಲೆಯ ಭಾಗಮಂಡದಲ್ಲಿ ಕಾವೇರಿ ನೀರಾವರಿ ನಿಗಮದ ವತಿಯಿಂದ ನಿರ್ಮಾಣಗೊಳ್ಳುತ್ತಿರುವ ಮೇಲು ಸೇತುವೆ ನಿರ್ಮಾಣ ಕಾಮಗಾರಿ ಪೂರ್ಣಗೊಂಡು, ಲೋಕಾರ್ಪಣೆಗೊಂಡಿದೆಯೇ; | ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ಕಾವೇರಿ ನೀರಾವರಿ ನಿಗಮದ ವತಿಯಿಂದ ನಿರ್ಮಾಣಗೊಳ್ಳುತ್ತಿರುವ ಮೇಲು ಸೇತುವೆ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ. |
| ಆ | ಕಾಮಗಾರಿ ಪೂರ್ಣ ಗೊಂಡಿರದಿದ್ದಲ್ಲಿ, ಸದರಿ ಕಾಮಗಾರಿಯ ಪ್ರಗತಿಯು ಪ್ರಸ್ತುತ ಯಾವ ಹಂತದಲ್ಲಿದೆ; | ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, 194 Piles, 36 Pile caps, 36 Piers ಗಳ casting ಕಾರ್ಯ ಪೂರ್ಣಗೊಂಡಿರುತ್ತದೆ. 33 Girder slabನ ಪೈಕಿ 26 Girder slabನ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಮೇಲು ಸೇತುವೆಯ ಉದ್ದವು 690ಮೀ. ಇದ್ದು, 520ಮೀ ಉದ್ದದ ಮೇಲ್ಹಾವಣಿ (Deckslab) ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿದ 170 ಮೀ ಮೇಲ್ಹಾವಣಿ (Deckslab) ಕಾಮಗಾರಿಯು ಪ್ರಗತಿಯಲ್ಲಿದೆ. 285 ಮೀ. ಉದ್ದದ ಕೂಡು ರಸ್ತೆಯು ಸೇರಿದಂತೆ (approach road & retaining wall ಒಳಗೊಂಡಂತೆ) ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| ಇ | ಸದರಿ ಕಾಮಗಾರಿಯು ಅನುಮೋದನೆ ಗೊಂಡ ವರ್ಷ ಹಾಗೂ ಕಾಮಗಾರಿಯ ಅಂದಾಜು ಮೊತ್ತ ಎಷ್ಟು; ಸದರಿ ಕಾಮಗಾರಿಗೆ ಇದುವರೆಗೆ ಬಿಡುಗಡೆ ಯಾಗಿರುವ ಹಾಗೂ ವಿನಿಯೋಗಿಸಿರುವ ಅನುದಾನವೆಷ್ಟು; (ವಿವರ ನೀಡುವುದು) | ಸದರಿ ಕಾಮಗಾರಿಯನ್ನು ರೂ.29.62 ಕೋಟಿ ಅಂದಾಜು ಮೊತ್ತದೊಂದಿಗೆ 2016-17 ರಲ್ಲಿ ಅನುಮೋದಿಸಲಾಗಿದೆ.<br>ಸದರಿ ಕಾಮಗಾರಿಯನ್ನು ರೂ.30.61 ಕೋಟಿ ಗುತ್ತಿಗೆ ಮೊತ್ತಕ್ಕೆ ವಹಿಸಲಾಗಿದೆ.<br>ಕಾಮಗಾರಿಯ ಅನುದಾನ ಮತ್ತು ವೆಚ್ಚದ ವಿವರಗಳು ಕೆಳಕಂಡಂತಿವೆ.<br>(ರೂ. ಕೋಟಿಗಳಲ್ಲಿ) |

| ಕ್ರಸಂ | ವರ್ಷ | ಅನುದಾನ | ವೆಚ್ಚ |
|---|---|---|---|
| 1 | 2017-18 | 5.00 | 0.00 |
| 2 | 2018-19 | 3.00 | 1.52 |
| 3 | 2019-20 | 3.00 | 4.14 |
| 4 | 2020-21 | 1.00 | 4.53 |
| 5 | 2021-22 | 3.00 | 3.68 (ಫೆಬ್ರವರಿ-2022 ಅಂತ್ಯಕ್ಕೆ) |
| | **ಒಟ್ಟು** | **15.00** | **13.87** |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
| --- | --- | --- |
| ಈ | ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಬಿಡುಗಡೆಗೆ ಬಾಕಿ ಇರುವ ಅನುದಾನದ ಒಟ್ಟು ಮೊತ್ತವೆಷ್ಟು; | ಕಾಮಗಾರಿಯನ್ನು ಪೂರ್ಣಗೊಳಿಸಲು ರೂ.16.74 ಕೋಟಿಗಳ ಅನುದಾನದ ಅವಶ್ಯಕತೆ ಇರುತ್ತದೆ. |
| ಉ | ಸದರಿ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? | ಕಾಮಗಾರಿಯನ್ನು ದಿನಾಂಕ:04-10-2018 ರಂದು 18 ತಿಂಗಳ ಕಾಲಾವಧಿಯೊಂದಿಗೆ ಗುತ್ತಿಗೆದಾರರಿಗೆ ವಹಿಸಲಾಗಿದ್ದು, ದಿನಾಂಕ:03-04-2020 ರೊಳಗೆ ಪೂರ್ಣಗೊಳಿಸ ಬೇಕಾಗಿರುತ್ತದೆ. ಆದರೆ ಕಾಮಗಾರಿಯ ಸ್ಥಳದಲ್ಲಿ ಭೂಸ್ವಾಧೀನ, ವಿದ್ಯುತ್ ಕಂಬಗಳ ಸ್ಥಳಾಂತರ, ಅರಣ್ಯ ಇಲಾಖೆಯ ಗಿಡಮರಗಳನ್ನು ತೆರವುಗೊಳಿಸಲು ವಿಳಂಬವಾಗಿರುವುದರಿಂದ, 2018 ಮತ್ತು 2019 ರ ಸಾಲುಗಳಲ್ಲಿ ಹೆಚ್ಚಿನ ಮಳೆಯಿಂದಾಗಿ ಹಾಗೂ 2020ರಲ್ಲಿ ಕೋವಿಡ್-19 ಸಾಂಕ್ರಾಮಿಕದ ಕಾರಣ ದೇಶಾದ್ಯಂತ ಲಾಕ್‌ಡೌನ್ ವಿಧಿಸಲಾಗಿದ್ದರಿಂದ ಕಾಮಗಾರಿಯು ವಿಳಂಬವಾಗಿರುತ್ತದೆ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, ಜುಲೈ-2022ರ ಅಂತ್ಯಕ್ಕೆ ಪೂರ್ಣ ಗೊಳಿಸಲು ಕ್ರಮವಹಿಸಲಾಗುತ್ತಿದೆ. |

*ಸಂಖ್ಯೆ:ಜಸಂಇ 78 ಎಸ್‌ಎಲ್‌ಎ 2022*

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು